ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

OFFICE OF THE DEPUTY COMMISSIONER, BALLARI DISTRICT, BALLARI-583101

Telephone: 08392-277100. Fax: 08392-272538 Email: dcbellary@gmail.com

ಸಂ/ಕಂ/ಭೂಸು/36/2018-19 ದಿನಾಂಕ: 12-03-2020

# -: ನಡವಳಿಗಳು :-

**ವಿಷಯ:-** ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ 41.62 ಎಕರೆ ಜಮೀನನ್ನು ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂಸುಧಾರಣೆ ಕಾಯ್ದೆ ಕಲಂ 109ರ ಅಡಿಯಲ್ಲಿ ಪರವಾನಿಗೆ ನೀಡುವ ಬಗ್ಗೆ.

**ಉಲ್ಲೇಖ:-** 1)ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ ಮನವಿ ದಿನಾಂಕ: 30.09.2018.

2)ತಹಶಿಲ್ದಾರರು, ಸಂಡೂರು ಇವರ ಪತ್ರ ಸಂಖ್ಯೆ/ಕಂ/ಭೂಸು/45/2018-19 ದಿನಾಂಕ:05.10.2018

3)ಆಯುಕ್ತರು,ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ/ಕಉಮಿ/SHLCC-SLSWCC/ಅನುಸರಣೆ/2018-19 ದಿನಾಂಕ:31.08.2018.

4)ಆಯುಕ್ತರು, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ/ವಾಡಾ/ಯೋಜನೆ/ಮಾಸ್ಟರ್‌ಪ್ಲಾನ್‌ಭೂ.ಉ.ಮಾ/08/2018-19 ದಿನಾಂಕ:21.01.2019.

******

ಉಲ್ಲೇಖಿತ (1)ರ ಪತ್ರದನ್ವಯ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ **56.99** ಎಕರೆ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 ರಡಿ ವಿನಾಯಿತಿ ನೀಡಲು ನಿಗದಿತ ನಮೂನೆ 15ಎ ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಉಲ್ಲೇಖಿತ (2)ರ ಪತ್ರದಲ್ಲಿ ತಹಶೀಲ್ದಾರರು, ಸಂಡೂರು ಇವರು ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ **54.48** ಎಕರೆ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 ರಡಿ ವಿನಾಯಿತಿ ನೀಡಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಜಮೀನುಗಳ ವಿವರ ಈ ಕೆಳಗಿನಂತೆ ಇರುತ್ತದೆ.

ಮುಂದುವರೆದಿದೆ ಪುಟ(2)ಕ್ಕೆ

Deputy Commissioner Office, BALLARI

| ಸರ್ವೇ ಸಂಖ್ಯೆ | ಪಹಣಿ ಪ್ರಕಾರ ವಿಸ್ತೀರ್ಣ | ಆಕಾರ್ ಬಂದ್ ಪ್ರಕಾರ ವಿಸ್ತೀರ್ಣ | ಪಹಣಿ ಪ್ರಕಾರ ಪಟ್ಟಾದಾರರ ಹೆಸರು |
|---|---|---|---|
| 1 | 2 | 4 | 5 |
| 68 | 2.96 | 2.96 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 69 | 7.35 | 7.35 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 70 | 5.31 | 5.31 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ1 | 4.72 | 4.72 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ2(ಪೈ) | 6.86 | 6.86 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಬಿ | 2.51 | 2.51 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 78/ಅ | 3.24 | 3.24 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 78/ಆ | 3.24 | 3.24 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 78/ಇ | 3.23 | 3.23 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 79 | 4.83 | 4.83 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 79 | 4.83 | 4.83 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 105 | 1.91 | 1.91 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ2(ಪೈ) | 6.00 | 6.00 | ಎಚ್.ತನವೀರವ ಅಹಮ್ಮದ್ ತಂದೆ ನೂರು ಅಹಮ್ಮದ್ |
| | 56.99 | 56.99 | |

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಜಮೀನುಗಳು ಪಟ್ಟಾ ಜಮೀನುಗಳಾಗಿರುತ್ತವೆ. ಇನಾಂ ಜಮೀನುಗಳಾಗಿರುವುದಿಲ್ಲ. ಸದರಿ ಜಮೀನುಗಳ ಮೇಲೆ ಗೇಣಿ, ನಮೂನೆ-7 ಅರ್ಜಿ, ಇನಾಂ ಕಾಯ್ದೆ, ಪಿ.ಟಿ.ಸಿ.ಎಲ್. ಕಾಯ್ದೆಯಡಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಹಾಗೂ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲವೆಂದು ತಹಶೀಲ್ದಾರರು, ಸಂಡೂರು ಇವರು ವರದಿ ಮಾಡಿರುತ್ತಾರೆ.

ಸ.ಸಂ73/ಎ2 ವಿಸ್ತೀರ್ಣ 12.86 ಎಕರೆ ಮತ್ತು ಸ.ಸಂ.73/ಬಿ ವಿಸ್ತೀರ್ಣ: 2.51 ಎಕರೆ ಜಮೀನುಗಳ ಒಟ್ಟು ವಿಸ್ತೀರ್ಣ 15.37ಎಕರೆ ಜಮೀನುಗಳು ಮೂಲತಃ ಮಂಜೂರಾತಿ ಜಮೀನಾಗಿರುವುದರಿಂದ ಮತ್ತು ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಸದರಿ ವಿಸ್ತೀರ್ಣವನ್ನು ಪ್ರಸ್ತಾವನೆಯಿಂದ ಕೈಬಿಡಲಾಗಿರುತ್ತದೆ.

Deputy Commissioner Office, B...

G:\LRM\LRM Files\LRM 2018-19 Files\36\ Minera Pvt Ltd 109

ಉಲ್ಲೇಖ (3) ರಲ್ಲಿ ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಸದರಿ ಸಂಸ್ಥೆಯವರಿಗೆ ಕೈಗಾರಿಕೆ ಸ್ಥಾಪನೆಗೆ ಜಮೀನು ಖರೀದಿಸಲು ಅನುಮತಿ ನೀಡಿರುತ್ತಾರೆ.

ಉಲ್ಲೇಖ (4) ರಲ್ಲಿ ಆಯುಕ್ತರು, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಪ್ರಸ್ತಾಪಿತ ಜಮೀನುಗಳ ಪೈಕಿ ಸ.ಸಂ.68, 70, 78 ಜಮೀನುಗಳು ಕೈಗಾರಿಕೆ ವಲಯದಲ್ಲಿ ಬರುತ್ತವೆ ಮತ್ತು ಸ.ಸಂ.105, 79, 69 ಬಫರ್ ಮತ್ತು ಕೈಗಾರಿಕಾ ಉದ್ದೇಶಕ್ಕೆ ಮಹಾ ಯೋಜನೆಯಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109(1)(i) ರ ಅಡಿ ಜಿಲ್ಲಾಧಿಕಾರಿಗಳು 20 ಘಟಕಗಳಿಗೆ ಅಂದರೆ 108.00 ಎಕರೆ ಜಮೀನನ್ನು ಕೈಗಾರಿಕೆಉದ್ದೇಶಕ್ಕಾಗಿ ಖರೀದಿಸಲು ವಿನಾಯಿತಿ ನೀಡಲು ಅಧಿಕಾರದತ್ತರಾಗಿರುತ್ತಾರೆ. ಆದ್ದರಿಂದ ಉಲ್ಲೇಖ (1) ರಿಂದ (4)ರ ವರದಿಗಳನ್ನು ಆಧರಿಸಿ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109(1)(i)ರಡಿ ಸಂಡೂರು ತಾಲ್ಲೂಕು ಯರೋಬನಹಳ್ಳಿ-ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ **41.62 ಎಕರೆ** ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಈ ಕೆಳಕಂಡ.

## -: ಆದೇಶ :-

**ಸಂ/ಕಂ/ಭೂಸು/36/2018-19** **ದಿನಾಂಕ: .03.2020**

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ **68, 69, 70, 73, 78, 79, 105, ಸರ್ವೇ ಸಂಖ್ಯೆಗಳ** ಒಟ್ಟು ವಿಸ್ತೀರ್ಣ **41.62 ಎಕರೆ** ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಭೂ ಸುಧಾರಣೆ ಕಾಯ್ದೆ 1961 ಕಲಂ 109(1)(i) ರಂತೆ ಸದರಿ ಕಾಯ್ದೆಯ ಕಲಂ 34, 66, 79ಎ, 79ಬಿಹಾಗೂ 80 ಗಳಿಗೆ ವಿನಾಯಿತಿ ನೀಡಿ ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿದೆ.

**ಷರತ್ತುಗಳು:-**

1) ಅರ್ಜಿದಾರ ಸಂಸ್ಥೆಯು ಕ್ರಯಕ್ಕೆ ಪಡೆಯುವ ಜಮೀನುಗಳಲ್ಲಿ ಬಂಡಿದಾರಿ, ಕಾಲುದಾರಿ ಮತ್ತು ಸಂಪರ್ಕ ರಸ್ತೆ, ಕೆರೆ-ಕಟ್ಟೆ, ಹಳ್ಳಗಳಿದ್ದರೆ ಅವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಕಾನೂನು ರೀತ್ಯ ಅವಕಾಶ ಮಾಡಿಕೊಡತಕ್ಕದ್ದು.
2) ಪ್ರಸ್ತಾಪಿತ ಜಮೀನುಗಳ ಮೇಲೆ ಯಾವುದೇ ಋಣಭಾರಗಳಿದ್ದಲ್ಲಿ ಅವುಗಳನ್ನು ಇತ್ಯರ್ಥಪಡಿಸಿಕೊಳ್ಳುವುದು ಅರ್ಜಿದಾರ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.
3) ಪಟ್ಟಾದಾರರು ಹಾಗೂ ಅರ್ಜಿದಾರ ಸಂಸ್ಥೆಯ ನಡುವೆ ಮಾರಾಟ ಪ್ರಕ್ರಿಯೆಯಲ್ಲಿ ಯಾವುದಾದರೂ ತೊಂದರೆಗಳಾದಲ್ಲಿ ಅದಕ್ಕೆ ಅರ್ಜಿದಾರ ಸಂಸ್ಥೆಯೇ ನೇರ ಹೊಣೆಗಾರರಾಗಿರುತ್ತಾರೆ.
4) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿ ಮಾಡಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು, ಮತ್ತು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಲಿಖಿತವಾಗಿ ಮಾಹಿತಿ ಸಲ್ಲಿಸತಕ್ಕದ್ದು.

ಮುಂದುವರೆದಿದೆ ಪುಟ (4)ಕ್ಕೆ

Deputy Commissioner Office, BALLARI
ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ

5) ವಿನಾಯಿತಿ ಪಡೆದವವರು ಸರ್ಕಾರಿ ಅಥವಾ ಯಾವುದೇ ಷಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956 ರ ಕಲಂ 3 ರಲ್ಲಿ ಹೇಳಿರುವಂತೆ ಶೇ. 55 ಪೇಯಿಡ್ ಆಫ್ ಶೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ, ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

6) ಈ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆದೇಶ ಪಡೆಯಬೇಕು.

7) ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ/ಸಿ.ಡಿ.ಪಿ./ಒ.ಡಿ.ಪಿ/ ವ್ಯಾಪ್ತಿಯಲ್ಲಿ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.

8) ಈ ಅನುಮತಿಯು ಕರ್ನಾಟಕ ಭೂ ಸುಧಾರಣೆ ಅಧಿನಿಯಮ ಕಾಯ್ದೆ 1961 ರ ಕಲಂ 109 ರ ಅನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆ ಅಡಿಯಲ್ಲಿ ಅಗತ್ಯ ಕ್ರಮ ಜರುಗಿಸಲು ಅವಕಾಶ ಇರುತ್ತದೆ.

9) ಸಂಸ್ಥೆ ನಡೆಸುವ ಚಟುವಟಿಕೆಗಳಲ್ಲಿ ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.

10) ಮೇಲಿನ ಷರತ್ತುಗಳ ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತಗೊಳಿಸಲಾಗುವುದು.

11) ಅರ್ಜಿದಾರರು ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 ರ ಅಡಿ ಕೃಷಿ ಜಮೀನು ಖರೀದಿಗೆ ಸಲ್ಲಿಸಿದ ದಾಖಲೆಗಳು ಸುಳ್ಳು ದಾಖಲೆಗಳಾಗಿದ್ದಲ್ಲಿ ಹಾಗೂ ಸೃಷ್ಟಿಸಿ ನೀಡಿದ ದಾಖಲೆಗಳು ಎಂದು ಕಂಡುಬಂದಲ್ಲಿ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 ರ ಅಡಿ ನೀಡುವ ಅನುಮತಿ ಆದೇಶ ತಾನಾಗಿಯೇ ರದ್ದಾಗುತ್ತದೆ.

Deputy Commissioner Office, BALLARI

ಜಿಲ್ಲಾಧಿಕಾರಿಗಳು,
ಬಳ್ಳಾರಿ.

ಇವರಿಗೆ,
ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್

ಪ್ರತಿಯನ್ನು :-
1) ಸಹಾಯಕ ಆಯುಕ್ತರು, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2) ತಹಶೀಲ್ದಾರರು, ಸಂಡೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3) ಜಿಲ್ಲಾ ನೋಂದಣಾಧಿಕಾರಿಗಳು, ಬಳ್ಳಾರಿ ಇವರಿಗೆ ಮಾಹಿತಿಗಾಗಿ.
4) ಉಪ ನೋಂದಣಾಧಿಕಾರಿಗಳು, ಸಂಡೂರು ಇವರಿಗೆ ಮಾಹಿತಿಗಾಗಿ.